# ಜಾಣ ನೀನಹುದೊ ಗುರು ಮುಖ್ಯಪ್ರಾಣ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 07.
2. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao, page No. 166.
3. **Note:** Lyrics are same in both the above reference books. The singer has followed these Wordings.

ರಾಗ: ನಾದನಾಮಕ್ರಿಯೆ ತಾಳ: ಆದಿ

ಜಾಣ ನೀನಹುದೊ, ಗುರು ಮುಖ್ಯಪ್ರಾಣ ನೀನಹುದೊ || ಪ ||

ಭಾರತಿರಮಣ ನಿನಗೆಣೆ ಕಾಣೆ ಮೂರು ಲೋಕದಲ್ಲಿದ್ದಂಥ
ಸಕಲ ಪ್ರಾಣದಲಿದ್ದಂಥ ಪಂಚಪ್ರಾಣಗಳಿಗೆ ಪ್ರಾಣನಾಥ || ಅಪ ||

ಕೊಟ್ಟ ರಾಮ ಮುದ್ರಿಕೆಯ
ಬೆಟ್ಟದಲ್ಲಿ ಸಾಗರ ದಾಟಿ ಸೀತೆ ಮುಂ-
ದಿಟ್ಟು ಕರಗಳ ಕಟ್ಟಿಕೊಂಡ ವೀರ ಹನುಮ || 1 ||

ಕುಂತಿಸುತ ನೀನಹುದೊ, ಅಸುರರಿಗೆ
ಹಂತಕಾರಿ ನೀನಹುದೊ
ಚಿಂತಿತ ನಮಚರಿತ ಸಂಗ ಚಿಂತಿಸುವ ಸಜ್ಜನರ
ಅಂತರಂಗವಾದ ನಮ್ಮ ಹಂತಕಾರಿ ಶೂರ ಭೀಮ || 2 ||

ಮುದ್ದು ಮುಖದವ ನೀನಹುದೊ, ಮುಜ್ಜಗದವನೆ
ಸದ್ಗುಣ ವಂದ್ಯ ನೀನಹುದೊ,
ಶುದ್ಧ ಮತವನೆ ನೀನುದ್ಧರಿಪೆನೆಂದು
ವೀರ ಬದ್ಧಕಂಕಣ ತೊಟ್ಟ ಮಧ್ವ ಮುನಿ ರಾಯ ಬಲು || 3 ||

ಇಂದು ವದನ ನೀನಹುದೊ, ಗುರುರಾಯ ಆ-
ನಂದತೀರ್ಥ ನೀನಹುದೊ, ನೊಂದು ಬಂದ ಜನರು
ವಂದಿಸೆ ನಿಮ್ಮ ಚರಣಕಮಲ, ನಂಬಿದಂಥ ಭಕ್ತರನ್ನು
ಕುಂದದೆ ಪೊರೆಯುವಿರಂತೆ || 4 ||

ಶೂರ ನೀನಹುದೊ, ವಾಯು ಕುಮಾರ ನೀನಹುದೊ,
ಪರಮನನ್ನ ನಂಬಿ ಬಲು,
ಪರಮ ಮಹಿಮನೆ ನಮ್ಮ
ಪುರಂದರ ವಿಠಲನ ಸೇವಿಸಿದ ಕೀರ್ತಿ ಪಡೆದ || 5 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

**ಸಕಲ ಪ್ರಾಣದಲ್ಲಿ** – ಎಲ್ಲ ಚೇತನವರ್ಗದಲ್ಲಿ.

**ಪಂಚಪ್ರಾಣಗಳಿಗೆ...** – ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನ ಎಂಬ ಐದು ಪ್ರಾಣ ಪ್ರವೃತ್ತಿಗಳು, ಅವುಗಳಲ್ಲಿ ತಾನೇ ನಿಂತು ಅವುಗಳ ಕಾರ್ಯವನ್ನು ಮಾಡಿಸುವವನು ಪ್ರಾಣನಾಥ.

**ಕರಗಳ ಕಟ್ಟಿಕೊಂಡ** – ವಿನೀತ ಭಾವದಿಂದ ನಿಂತ.

**ಕುಂತಿಸುತ** – ಭೀಮನಾಗಿ.

**ಚಿಂತಿತ ನಮಚರಿತ ಸಂಗ** – ಪಾಠ ಅಶುದ್ಧವಾಗಿದೆ.

**ಹೊಂತಕಾರಿ** – ತುಂಬ ಜಾಣ; ನಾನಾ ಉಪಾಯಗಳನ್ನು ಬಲ್ಲವನು.

**ಮುಜ್ಜಗದವ** – ಮೂರು ಲೋಕಗಳಲ್ಲೂ ವ್ಯಾಪಕನಾದವನು.

**ಇಂದುವದನ** – ಚಂದ್ರನಂತೆ ಅಹ್ಲಾದಕರವಾದ ಮುಖವುಳ್ಳವನು.

**ಆನಂದ ತೀರ್ಥ** – ಮಧ್ವಾಚಾರ್ಯರ ಹೆಸರು.

**ಪರಮನನ್ನು** – ಹರಿಯನ್ನು.

**Classification:** Keerthane
**Ankita:** purandara vittala

**Location:** NA

**Category:** Hanuma Stuti, Madhwacharya Stuti

**Sub-Category:** hanuma, hanuma-bhima-madhwa, bhima, madhva, Bharati, loka, rama, mudre, Samudra, sita, kai, putra, kunti, asura, muni, jana, padma, vira, Chandra,

**Pravachana:** NA

**Explanation:** NA